# IN THE COURT OF THE ADDL. SENIOR CIVIL JUDGE & JMFC., GUBBI

## **OS – 26/2023**

Witness present and duly sworn on : 05.09.2024.

Cross Examination: by Counsel for Plaintiffs :

ನನ್ನ ತಂದೆಯ ಹೆಸರು ಜಿ.ಸಿ ನರಸಿಂಹಮೂರ್ತಪ್ಪ. ನನ್ನ ತಾಯಿಯ ಹೆಸರು ಪಾರ್ವತಮ್ಮ. ನನ್ನ ತಂದೆಗೆ 4 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಕ್ಕಳು ಎಂದರೆ ಸರಿ. ನನ್ನ ತಂದೆಗೆ ನಾನೆ ಹಿರಿಮಗ ಎಂದರೆ ಸರಿ. 2 ನೇ ಯವರು ನನ್ನ ತಂಗಿ ನಾಗರತ್ಮಮ್ಮ. 3 ನೇಯವರು ರಮೇಶ್ ಮತ್ತು 4 ನೇಯವರು ಪ್ರಕಾಶ್. 5 ನೇಯವರು ಈ ದಾವೆಯ 1 ನೇ ವಾದಿ ಜಿ.ಎನ್ ಶಿವಕುಮಾರ್ ಎಂದರೆ ಸರಿ. ನಾವು 5 ಜನ ಸೇರಿ ಒಟ್ಟು ಕುಟುಂಬದ ಆಸ್ತಿಗಳನ್ನು ದಿನಾಂಕಃ 08.09.2014 ರಂದು ವಿಭಾಗ ಮಾಡಿಕೊಂಡು ಸದರಿ ದಾಖಲೆಯನ್ನು ಉಪನೊಂದಣಾಧಿಕಾರಿಗಳ ಮುಂದೆ ನೊಂದಣಿ ಮಾಡಿಸಿದ್ದೇವೆ ಎಂದರೆ ಸರಿ. ಗುಬ್ಬಿ ನ್ಯಾಯಾಲಯದ ಸರ್ಕಲ್ ನಿಂದ ರೈಲ್ವೆ ನಿಲ್ದಾಣಕ್ಕೆ ಹೋಗುವ ತನಕ ರಸ್ತೆಯನ್ನು ರೈಲ್ವೆ ನಿಲ್ದಾಣದ ರಸ್ತೆ ಎಂದು ಕರೆಯುತ್ತಾರೆ ಎಂದರೆ ಸರಿ. ಸದರಿ ರಸ್ತೆಯನ್ನು ಎಂ.ಜಿ. ರಸ್ತೆ ಎಂದು ಸಹ ಕರೆಯುತ್ತಾರೆಂದರೆ ಸರಿ. ದಾವಾ ಆಸ್ತಿ ರೈಲ್ವೆ ನಿಲ್ದಾಣ ರಸ್ತೆ ಮತ್ತು ಎಂ.ಜಿ ರಸ್ತೆಗೆ ಹೊಂದಿಕೊಂಡು ವಿದ್ಯಾನಗರ ಬಡಾವಣೆಯಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಯು ರಸ್ತೆಗೆ ಹೊಂದಿಕೊಂಡು ಪಶ್ಚಿಮ ದಿಕ್ಕಿನಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಯು ಮುಂಚೆ ಚನ್ನಶೆಟ್ಟಿಹಳ್ಳಿಯ ಸರ್ವೆ ನಂ.55/4 ಕ್ಕೆ ಸಂಭಂದಿಸಿದೆ ಎಂ ದರೆ ಸರ್ವೆ ನಂ.55/1. ಸದರಿ ಆಸ್ತಿಯ ವಿಸ್ತೀರ್ಣ 2 ಗುಂಟೆ ಇದೆ ಎಂದರೆ 2 ಎಕರೆ 32 ಗುಂಟೆ ಇತ್ತು. ಸರ್ವೆ ನಂ.55/4 ಗೆ ದಾವಾ ಆಸ್ತಿಯು ಸೇರಿದ್ದರು ಸಹ ನಾನು ಸರ್ವೆ ನಂ.55/1 ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2 ಗುಂಟೆ ಆಸ್ತಿಯನ್ನು ವಾಸ ಉಪಯೋಗಕ್ಕೆ ಬದಲಾವಣೆ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.55/1 ರಲ್ಲಿ 37X36 ಚದರ ಅಡಿ ಆಸ್ತಿಯನ್ನು ಮನೆ ಕಟ್ಟುವ ಸಲುವಾಗಿ ಮುನ್ಸಿಪಲ್ ಖಾತೆ

ಪಡೆದಿರುತ್ತೇವೆ. ಕನವರ್ಷನ್ ? ಆದ ನಂತರ ಆಸ್ತಿಗೆ ಖಾತೆ ನಂ.3028/168 ನೀಡಿರುತ್ತಾರೆಂದರೆ ಸರಿ.

ನನ್ನ ತಂದೆಯವರ ಜೀವಿತ ಕಾಲದಲ್ಲಿ ಸದರಿ ಆಸ್ತಿಯಲ್ಲಿ ಒಂದು ಆರ್.ಸಿ.ಸಿ ಮತ್ತು ಒಂದು ಹಂಚಿನ ಮನೆ ಕಟ್ಟಿಸಿದ್ದರು ಎಂದರೆ ಆರ್.ಸಿ.ಸಿ ಮನೆ ಮಾತ್ರ ಕಟ್ಟಿಸಿದ್ದರು. ರೈಲ್ವೆ ಸ್ಟೇಷನ್ ಮತ್ತು ಎಂ.ಜಿ ರಸ್ತೆಗೆ ಹೊಂದಿಕೊಂಡು ಹಂಚಿನ ಮನೆ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ಮರಣದ ನಂತರ ನಾನು ಮತ್ತು ನನ್ನ ಅಣ್ಣ ತಮ್ಮಂದಿರು ದಿನಾಂಕಃ 08.09.2014 ರಂದು ವಿಭಾಗ ಪತ್ರ ಮಾಡಿಕೊಂಡೆವು ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಆರ್.ಸಿ.ಸಿ ಮನೆ ಹಂಚಿಕೊಂಡಿದ್ದು ವಾದಿಗೆ ಹಂಚಿನ ಮನೆ ಬಿಟ್ಟು ಕೊಟ್ಟೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಗೆ ಸರ್ವೆ ನಂ.55/1 ರಲ್ಲಿ ಇರುವ ಮನೆಯನ್ನು ಬಿಟ್ಟುಕೊಟ್ಟಿರುತ್ತೇವೆ. ಸದರಿ ವಿಭಾಗ ಪತ್ರದಲ್ಲಿ ವಾದಿಗೆ ಸದರಿ ಮನೆ ಬಿಟ್ಟುಕೊಟ್ಟಿರುವ ಬಗ್ಗೆ ನಮೂದು ಇದೆ. ವಿಭಾಗ ಪತ್ರದ ಪ್ರಕಾರ ಖಾತೆ ನಂ.3028/168 ಆಸ್ತಿ ಯಲ್ಲಿ ನನಗೆ 10X16 ಅಡಿ ಆಸ್ತಿ ಬಂದಿದೆ ಎಂದರೆ ಸರಿ. ಅದರಂತೆ ನಾನು ಪಟ್ಟಣ ಪಂಚಾಯ್ತಿಯಲ್ಲಿ ಖಾತೆ ನಂ.3310/3028/1 ಮಾಡಿಸಿಕೊಂಡಿದ್ದೇನೆಂದರೆ ಸರಿ. ಅದೇ ರೀತಿ ನನ್ನ ತಮ್ಮ ರಮೇಶ್ ರವರು 12X15 ಅಡಿ ಆಸ್ತಿಗೆ ಸಂಭಂದಿಸಿದಂತೆ ಖಾತೆ ನಂ.3310/3028/2 ಮಾಡಿಸಿಕೊಂಡಿದ್ದಾರೆಂದರೆ ಸರಿ. ಅದೇ ರೀತಿ ನನ್ನ ತಮ್ಮ ಪ್ರಕಾಶ್ ರವರು 19X15 ಅಡಿ ಆಸ್ತಿಗೆ ಸಂಭಂದಿಸಿದಂತೆ ಖಾತೆ ನಂ.3310/3028/3 ಮಾಡಿಸಿಕೊಂಡಿದ್ದಾರೆಂದರೆ ಸರಿ. ವಾದಿಯು ಅವರ ಭಾಗಕ್ಕೆ ಬಂದಿರುವ ಆಸ್ತಿಯನ್ನು ಖಾತೆ ಮಾಡಿಸಿಕೊಳ್ಳಲು ಹೋದಾಗ ವಿಭಾಗ ಪತ್ರದಲ್ಲಿ ಖಾತೆ ನಂ.3038/1 ಎಂದು ತಪ್ಪಾಗಿ ನಮೂದು ಆಗಿದ್ದ ಕಾರಣ ಅವರ ಹೆಸರಿಗೆ ಖಾತೆ ಆಗಲಿಲ್ಲ ಎಂದರೆ ಸರಿಯಲ್ಲ.

ಆದ ಕಾರಣ 1 ನೇ ವಾದಿ ಸದರಿ ತಿದ್ದುಪಡಿ ಮಾಡಿಕೊಂಡು ನನಗೆ ತಿಳುವಳಿಕೆ ಪತ್ರ ಕೊಟ್ಟರು ಎಂದರೆ ಸರಿಯಲ್ಲ. ನನಗೆ ತಿಳುವಳಿಕೆ ಪತ್ರ ಬಂದಿರುವುದಿಲ್ಲ. ಸದರಿ ತಿಳುವಳಿಕೆ ಪತ್ರ ನನಗೆ ಬಂದಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತಿಳುವಳಿಕೆ ಪತ್ರ ತಲುಪಿದ ನಂತರ ನನ್ನ ತಮ್ಮಂದಿರು ಪ್ರಕಾಶ್ ಮತ್ತು ರಮೇಶ್ ತಿದ್ದುಪಡಿಯ ಬಗ್ಗೆ ಒಪ್ಪಿಕೊಂಡಿರುತ್ತಾರೆಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ತಪ್ಪು ಅಗಿರುವ ಕಾರಣ ವಾದಿಯು ಈ ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ ನಾನು ವಾದಿಯ

ವಿರುದ್ದ OS No.68/2021 ಎಂಬ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ವಿಭಾಗದ ಪತ್ರದ ಪ್ರಕಾರ ನಾವು ಮೂರು ಜನ ಖಾತೆ ಮಾಡಿಸಿಕೊಂಡು, ವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಇವತ್ತಿಗೂ ಸಹ ವಾದಿಯು ವಿಭಾಗ ಪತ್ರದ ಮೂಲಕ ನಿವೇಶನದ ಸ್ವಾಧೀನದಲ್ಲಿ ಇದ್ದಾರೆ ಎಂದರೆ 4 ಜನ ಸೇರಿ ಬಾಡಿಗೆಗೆ ಕೊಟ್ಟಿದ್ದೇವೆ.

ರೈಲ್ವೆ ಸ್ಟೇಷನ್ ಮತ್ತು ಎಂ.ಜಿ ರಸ್ತೆಗೆ ಹೊಂದಿಕೊಂಡು ನ್ಯಾಯಾಲಯದ ಸರ್ಕಲ್ ನಿಂದ 300 ಮೀಟರ್ ದೂರದಲ್ಲಿ ನಮ್ಮ ಕುಟುಂಬದ ಆಸ್ತಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯನ್ನು ಭಾಗ ಮಾಡಿಕೊಂಡಿದ್ದೇವೆ. ಸದರಿ ಆಸ್ತಿಯ ಖಾತೆ ನಂ.188/164 ಎಂದರೆ ಸರಿ. ನಾವು ಮೂರು ಜನ ಖಾತೆ ಮಾಡಿಸಿಕೊಂಡು ವಾದಿಗೆ ಮೋಸ ಮಾಡಲು ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಾರಿಕತ್ತಲ್ಲಿ ವಾದಿಯ ಭಾಗದ ಬಗ್ಗೆ ಬರೆದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಜಾಗ ಇರುವುದಿಲ್ಲ.

(Further cross examination deferred at the request of counsel for the plaintiffs)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi